# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 09 ಪಿಜಿಸಿ 2017

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ.
ಬೆಂಗಳೂರು, ದಿನಾಂಕ: 07.01.2017.

## ಅಧಿಸೂಚನೆ

**ವಿಷಯ :** 2017-18ನೇ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತವಾಗಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ನೋಂದಣಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:**
1. ಕರ್ನಾಟಕ ಶಿಕ್ಷಣ ಕಾಯಿದೆ 1983 ಸೆಕ್ಷನ್-30 ಮತ್ತು 31
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು(ವರ್ಗೀಕರಣ ಮತ್ತು ನೋಂದಣಿ) ನಿಯಮ-1997.
3. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ-2009.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿಜಿಸಿ 2014 ದಿನಾಂಕ:11.11.2014.
5. ಸರ್ಕಾರದ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಇಡಿ 369 ಪಿಜಿಸಿ 2014 ದಿನಾಂಕ: 02.05.2015.
6. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 359 ಪಿಜಿಸಿ 2015 ದಿನಾಂಕ: 05.09.2015.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 549 ಪಿಜಿಸಿ 2015 ದಿನಾಂಕ: 02.11.2015.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 617 ಪಿಜಿಸಿ 2015 ದಿನಾಂಕ: 23.12.2015
9. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 140 ಪಿಜಿಸಿ 2016 ದಿನಾಂಕ: 20.05.2016
10. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999 ದಿನಾಂಕ: 09.10.2006

** ** ** **

2017-18ನೇ ಶೈಕ್ಷಣಿಕ ಸಾಲಿನಿಂದ ಅನುದಾನರಹಿತವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಸಂಸ್ಥೆಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಇಲಾಖಾ ವೆಬ್‌ಸೈಟ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ (ವೆಬ್‌ಸೈಟ್ ವಿಳಾಸ: WWW.Schooleducation.Kar.nic.in).

## ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ನೋಂದಣಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದಕಾರ್ಯವಿಧಾನ

ಉದ್ದೇಶಿತ ಶಾಲಾ ಆಡಳಿತ ಮಂಡಳಿಯು ಹೊಸದಾಗಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ತರಗತಿ 1 ರಿಂದ 5ರವರೆಗೆ ಕಿರಿಯ ಪ್ರಾಥಮಿಕ ಶಾಲೆಯನ್ನು ತೆರೆಯಲು ಉದ್ದೇಶಿಸಿದಲ್ಲಿ ಉಲ್ಲೇಖ-4, 5 ಮತ್ತು 6ರ ಅಧಿಸೂಚನೆಗಳನ್ವಯ ನಿಗಧಿಪಡಿಸಲಾದ ಅಗತ್ಯ ವಿಸ್ತೀರ್ಣದ ಶೈಕ್ಷಣಿಕ ಉದ್ದೇಶಕ್ಕೆ ಪರಿವರ್ತಿಸಲಾದ ಭೂಮಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕಾಗುತ್ತದೆ.

ಈಗಾಗಲೇ ಶಾಲಾ ಆಡಳಿತ ಮಂಡಳಿಯು ತರಗತಿ 1 ರಿಂದ 5ರವರೆಗೆ ಇಲಾಖೆಯ ಪೂರ್ವಾನುಮತಿಯೊಂದಿಗೆ ಶಾಲೆಯನ್ನು ತೆರೆದು ಮಾನ್ಯತೆಯನ್ನು ಪಡೆದು ನಡೆಸುತ್ತಿದ್ದು, 2017-18ನೇ ಶೈಕ್ಷಣಿಕ ಸಾಲಿಗೆ ಅದೇ ಶಾಲಾ ಕಟ್ಟಡದಲ್ಲಿ ತರಗತಿ 6 ರಿಂದ 8ನೇ ವರೆಗೆ ಶಾಲೆಯನ್ನು ತೆರೆಯಲು ಉದ್ದೇಶಿಸಿದಲ್ಲಿ ಉಲ್ಲೇಖ-9ರ ಸುತ್ತೋಲೆಯನ್ವಯ ಸಾಕಷ್ಟು ಹೆಚ್ಚುವರಿ ತರಗತಿ ಕೋಣೆಗಳು, ಪ್ರಯೋಗಾಲಯ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಅಗತ್ಯ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಿರಬೇಕು.

ಉದ್ದೇಶಿತ ಶಾಲಾ ಆಡಳಿತ ಮಂಡಳಿಯು ಹೊಸದಾಗಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರೌಢಶಾಲೆಯನ್ನು (ತರಗತಿ 9 ಮತ್ತು 10) ತೆರೆಯಲು ಉದ್ದೇಶಿಸಿದಲ್ಲಿ ಉಲ್ಲೇಖ-4, 5 ಮತ್ತು 6ರ ಅಧಿಸೂಚನೆಗಳನ್ವಯ ನಿಗಧಿಪಡಿಸಲಾದ ಅಗತ್ಯ ಭೂಮಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕಾಗುತ್ತದೆ.

ಈಗಾಗಲೇ ಶಾಲಾ ಆಡಳಿತ ಮಂಡಳಿಯು ತರಗತಿ 1 ರಿಂದ 8ರವರೆಗೆ ಇಲಾಖೆಯ ಪೂರ್ವಾನುಮತಿಯೊಂದಿಗೆ ಶಾಲೆಯನ್ನು ತೆರೆದು ಮಾನ್ಯತೆಯನ್ನು ಪಡೆದು ನಡುಸುತ್ತಿದ್ದು, 2017-18ನೇ ಶೈಕ್ಷಣಿಕ ಸಾಲಿಗೆ ಅದೇ ಶಾಲಾ ಕಟ್ಟಡದಲ್ಲಿ ಪ್ರೌಢಶಾಲೆಯನ್ನು (ತರಗತಿ 9 ಮತ್ತು 10) ತೆರೆಯಲು ಹಾಗೂ 1-5/6-8ನೇ ತರಗತಿಗಳು ನಡೆಯುತ್ತಿದ್ದು 9 ಮತ್ತು 10ನೇ ತರಗತಿಗಳನ್ನು ತೆರೆಯಲು ಉದ್ದೇಶಿಸಿದಲ್ಲಿ ಉಲ್ಲೇಖ-9ರ ಸುತ್ತೋಲೆಯನ್ವಯ ಸಾಕಷ್ಟು ಹೆಚ್ಚುವರಿ ತರಗತಿ ಕೋಣೆಗಳು, ಪ್ರಯೋಗಾಲಯ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಅಗತ್ಯ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಿರಬೇಕು.

ಹೊಸದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯಲು ಉಲ್ಲೇಖ-4,6 ಮತ್ತು 8ರ ಸರ್ಕಾರದ ಅಧಿಸೂಚನೆಯಂತೆ ನಿಗಧಿಪಡಿಸಿರುವ ನೋಂದಣಿ ಶುಲ್ಕ, ಸಂಸ್ಕರಣಾ ಶುಲ್ಕ ಹಾಗೂ ನೋಂದಣಿ ಪ್ರಾಧಿಕಾರದ ವಿವರ ಕೆಳಕಂಡಂತಿದೆ.

| ಕ್ರಸಂ | ತರಗತಿ ಮತ್ತು ಮಾಧ್ಯಮ | ನೋಂದಣಿ ಶುಲ್ಕ | ಸಂಸ್ಕರಣಾ ಶುಲ್ಕ | ಆನ್‌ಲೈನ್ ನಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಪೂರಕ ದಾಖಲೆಗಳನ್ನು ಸಲ್ಲಿಸಬೇಕಾದ ಸ್ವೀಕೃತಿ ಪ್ರಾಧಿಕಾರದ ವಿವರ | ನೋಂದಣಿ ಪ್ರಾಧಿಕಾರದ ವಿವರ |
|---|---|---|---|---|---|
| 1 | 1 ರಿಂದ 5ನೇ ತರಗತಿ ಎಲ್ಲಾ ಮಾಧ್ಯಮ | ರೂ 25000/- | ರೂ 10000/- | ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು |

| | | | | | |
|---|---|---|---|---|---|
| 2 | 6 ರಿಂದ 8ನೇ ತರಗತಿ ಕನ್ನಡ ಮಾಧ್ಯಮ ಮತ್ತು ಇತರೆ ಮಾತೃ ಭಾಷೆ | ರೂ 50000/- | ರೂ 20000/- | ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು |
| 3 | 6 ರಿಂದ 8ನೇ ತರಗತಿ ಆಂಗ್ಲ ಮಾಧ್ಯಮ | ರೂ 1.00 ಲಕ್ಷಗಳು | ರೂ 20000/- | ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು |
| 4 | 9 ಮತ್ತು 10ನೇ ತರಗತಿ ಕನ್ನಡ ಮಾಧ್ಯಮ ಮತ್ತು ಇತರೆ ಮಾತೃ ಭಾಷೆ | ರೂ 50000/- | ರೂ 20000/- | ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸಂಬಂಧ ಪಟ್ಟ ಆಯುಕ್ತಾಲಯದ ಆಯುಕ್ತರು/ ಅಪರ ಆಯುಕ್ತರು |
| 5 | 9 ಮತ್ತು 10ನೇ ತರಗತಿ ಆಂಗ್ಲ ಮಾಧ್ಯಮ | ರೂ 1.00 ಲಕ್ಷಗಳು | ರೂ 20000/- | ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸಂಬಂಧ ಪಟ್ಟ ಆಯುಕ್ತಾಲಯದ ಆಯುಕ್ತರು/ಅಪರ ಆಯುಕ್ತರು |

ಹೊಸ ಶಾಲೆ ನೋಂದಣಿಗೆ ಸಲ್ಲಿಸಿದ ಅರ್ಜಿಯು ತಿರಸ್ಕೃತಗೊಂಡ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಪಾವತಿಸಿದ ನೋಂದಣಿ ಶುಲ್ಕವನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು. ಆದರೆ ಸಂಸ್ಕರಣಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ. ಶಾಲಾ ಆಡಳಿತ ಮಂಡಳಿಗಳು ನೋಂದಣಿ ಮತ್ತು ಸಂಸ್ಕರಣಾ ಶುಲ್ಕಕ್ಕೆ ಪ್ರತ್ಯೇಕವಾಗಿ ಬ್ಯಾಂಕ್ ಡಿ.ಡಿಗಳನ್ನು ನೋಂದಣಿ ಪ್ರಾಧಿಕಾರದ ಹೆಸರಿನಲ್ಲಿ ಪಡೆಯತಕ್ಕದ್ದು.

ನಾಗರೀಕ ಸೇವಾ ಖಾತ್ರಿ ಅಧಿನಿಯಮ-2011 (ಸಕಾಲ) ಜಾರಿಗೆ ಬಂದ ನಂತರ ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಯನ್ನು ಸಕಾಲ ಸೇವೆಯಲ್ಲಿ ಅಳವಡಿಸಲಾಗಿದೆ. ಸಕಾಲ ಸೇವೆಯಲ್ಲಿ ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ಇತ್ಯರ್ಥ ಪಡಿಸಲು 90 ಕೆಲಸದ ದಿನಗಳನ್ನು ನಿಗಧಿಪಡಿಸಲಾಗಿದೆ. ಈ ಹಿನ್ನಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊಸ ಶಾಲೆಗಳ ನೋಂದಣಿ ಅರ್ಜಿಯನ್ನು ಕಡ್ಡಾಯವಾಗಿ ಸಕಾಲದಡಿ ನೋಂದಾಯಿಸಬೇಕು.

ನೋಂದಣಿ ಪ್ರಾಧಿಕಾರಿಗಳು ಹೊಸ ಶಾಲೆಗಳಿಗೆ ನೋಂದಣಿ ನೀಡುವ ಸಂದರ್ಭದಲ್ಲಿ ಮಾನ್ಯತೆ ಪಡೆದು ನಡೆಯುತ್ತಿರುವ ಶಾಲೆಗಳಿಗೆ ಉನ್ನತ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಶಾಲೆಗಳಿಗೆ ಆಧ್ಯತೆಯನ್ನು ನೀಡುವುದು.

ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೋಂದಣಿ ನೀಡುವ ಸಂದರ್ಭದಲ್ಲಿ ನೋಂದಣಿ ಪ್ರಾಧಿಕಾರಿಗಳು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು-2012ರ ಭಾಗ-3 ನಿಯಮ-4ರಂತೆ ಹೊಸ ಶಾಲೆಯನ್ನು ಪ್ರಾರಂಭಿಸುವ ಅಗತ್ಯತೆಯ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಖಚಿತ ಪಡಿಸಿಕೊಂಡು ನೋಂದಣಿ ನೀಡುವುದು.

ಅರ್ಹ ಸಂಸ್ಥೆಗಳು ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ಅದರ ಮುದ್ರಿತ ಪ್ರತಿಯನ್ನು ಪೂರಕ ದಾಖಲೆಗಳೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊಸ ಶಾಲೆಗಳ ನೋಂದಣಿಗೆ ಆಡಳಿತ ಮಂಡಳಿಗಳಿಂದ ಪ್ರಸ್ತಾವನೆ ಸ್ವೀಕೃತಿಯಾದ ನಂತರ ಆನ್‌ಲೈನ್‌ತಂತ್ರಾಂಶದಲ್ಲಿ ನಮೂದಿಸಿರುವ ವಿವರಗಳನ್ನು ಪರಿಶೀಲಿಸಿದ ವಿವರಗಳಂತೆ ಪೂರಕ ದಾಖಲೆಗಳು ಇದೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಂಡು ಭೌತಿಕವಾಗಿ ಹಾಗೂ ಆನ್‌ಲೈನ್‌ತಂತ್ರಾಂಶದ ಮೂಲಕ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಗಳ ಉಪನಿರ್ದೇಶಕರೇ ನೋಂದಣಿ ಪ್ರಾಧಿಕಾರಿಯಾಗಿರುವುದರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಭೌತಿಕವಾಗಿ ಹಾಗೂ ಆನ್‌ಲೈನ್‌ತಂತ್ರಾಂಶದ ಮೂಲಕ ಸಲ್ಲಿಕೆಯಾಗುವ ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ನೋಂದಣಿ ನೀಡಲು ಅರ್ಹಇರುವ ಪ್ರಸ್ತಾವನೆಗಳಿಗೆ ಆನ್‌ಲೈನ್‌ತಂತ್ರಾಂಶದಿಂದ ನೋಂದಣಿ ಪ್ರಮಾಣ ಪತ್ರದ ಮುದ್ರಿತ ಪ್ರತಿಯನ್ನು ಪಡೆದು ಸಹಿಮಾಡಿ ಸಂಬಂಧಿಸಿದ ಆಡಳಿತ ಮಂಡಳಿಗೆ ರವಾನಿಸುವುದು ಹಾಗೂ ಆನ್‌ಲೈನ್‌ನಲ್ಲಿ ಸದರಿ ಅರ್ಜಿಯನ್ನು ಇತ್ಯರ್ಥಪಡಿಸುವುದು. ಅನರ್ಹ ಪ್ರಸ್ತಾವನೆಗಳನ್ನು ಸಹ ತಿರಸ್ಕರಿಸಿ ಆನ್‌ಲೈನ್‌ನಲ್ಲಿ ಇತ್ಯರ್ಥಪಡಿಸಿ ಆಡಳಿತ ಮಂಡಳಿಗೆ ಹಿಂಬರಹ ನೀಡುವುದು.

ಪ್ರೌಢಶಾಲೆಗಳ ನೋಂದಣಿ ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ ಭೌತಿಕವಾಗಿ ಹಾಗೂ ಆನ್‌ಲೈನ್‌ತಂತ್ರಾಂಶದ ಮೂಲಕ ಸ್ಪಷ್ಟ ಅಭಿಪ್ರಾಯದೊಂದಿಗೆ ಸಂಬಂಧಿಸಿದ ಆಯುಕ್ತಾಲಯಗಳಿಗೆ ಸಲ್ಲಿಸುವುದು.

**ಹೊಸ ಶಾಲೆಗಳ ನೋಂದಣಿಗೆ ನಿಗಧಿಪಡಿಸಲಾದ ವೇಳಾಪಟ್ಟಿ**
**2017-18ನೇ ಸಾಲಿನಲ್ಲಿ 1 ರಿಂದ 5ನೇ ತರಗತಿ ಹಾಗೂ 6 ರಿಂದ 8ನೇ ತರಗತಿಯ ಹೊಸ ಶಾಲೆಗಳಿಗೆ ನೋಂದಣಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| ಕ್ರಸಂ | ವಿಷಯ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಅರ್ಹ ನೋಂದಾಯಿತ ಸಂಸ್ಥೆಗಳು ಆನ್‌ಲೈನ್‌ನಲ್ಲಿ ಹೊಸ ಶಾಲೆಗಳ ನೋಂದಣಿಗಾಗಿ ಅರ್ಜಿಗಳನ್ನು ಭರ್ತಿಮಾಡಲು ಕಡೆಯ ದಿನಾಂಕ | 31-01-2017 |
| 2 | ಆನ್‌ಲೈನ್‌ನಲ್ಲಿ ಹೊಸ ಶಾಲೆಗಳ ನೋಂದಣಿಗಾಗಿ ಭರ್ತಿಮಾಡಿದ ಅರ್ಜಿಯ ಮುದ್ರಿತ ಪ್ರತಿಯೊಂದಿಗೆ ಪೂರಕ ದಾಖಲೆಗಳನ್ನು ಒಳಗೊಂಡ ಪ್ರಸ್ತಾವನೆಗಳನ್ನು ಆಡಳಿತ ಮಂಡಳಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಲು ಕಡೆಯ ದಿನಾಂಕ | 07-02-2017 |
| 3 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಭೌತಿಕ ಹಾಗೂ ಆನ್‌ಲೈನ್‌ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 25-02-2017 |
| 4. | ಉಪನಿರ್ದೇಶಕರು ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ಭೌತಿಕ ಹಾಗೂ ನೂತನ ಆನ್‌ಲೈನ್‌ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ/ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ | 31-03-2017 |

**2017–18ನೇ ಸಾಲಿನಲ್ಲಿ ಹೊಸದಾಗಿ (ಪ್ರತ್ಯೇಕವಾಗಿ) ಪ್ರೌಢ ಶಾಲೆಗಳಿಗೆ ನೋಂದಣಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| ಕ್ರಸಂ | ವಿಷಯ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಅರ್ಹ ನೋಂದಾಯಿತ ಸಂಸ್ಥೆಗಳು ಆನ್‌ಲೈನ್‌ನಲ್ಲಿ ಹೊಸ ಶಾಲೆಗಳ ನೋಂದಣಿಗಾಗಿ ಅರ್ಜಿಗಳನ್ನು ಭರ್ತಿಮಾಡಲು ಕಡೆಯ ದಿನಾಂಕ | 31-01-2017 |
| 2 | ಆನ್‌ಲೈನ್‌ನಲ್ಲಿ ಹೊಸ ಶಾಲೆಗಳ ನೋಂದಣಿಗಾಗಿ ಭರ್ತಿಮಾಡಿದ ಅರ್ಜಿಯ ಮುದ್ರಿತ ಪ್ರತಿಯೊಂದಿಗೆ ಪೂರಕ ದಾಖಲೆಗಳನ್ನು ಒಳಗೊಂಡ ಪ್ರಸ್ತಾವನೆಗಳನ್ನು ಆಡಳಿತ ಮಂಡಳಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಲು ಕಡೆಯ ದಿನಾಂಕ | 07-02-2017 |
| 3 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಭೌತಿಕ ಹಾಗೂ ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 25-02-2017 |
| 4 | ಉಪನಿರ್ದೇಶಕರು ಸಂಬಂಧಿಸಿದ ಆಯುಕ್ತಾಲಯಕ್ಕೆ ಪ್ರಸ್ತಾವನೆಯನ್ನು ಭೌತಿಕ ಹಾಗೂ ಆನ್‌ಲೈನ್‌ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 10-03-2017 |
| 5 | ಸಂಬಂಧಿಸದ ಆಯುಕ್ತಾಲಯಗಳಲ್ಲಿ ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ಭೌತಿಕ ಹಾಗೂ ನೂತನ ಆನ್‌ಲೈನ್‌ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ/ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ | 31-03-2017 |

**<u>ಪದವಿಪೂರ್ವ ಕಾಲೇಜುಗಳ ನೋಂದಣಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದಕಾರ್ಯವಿಧಾನ</u>**

2017–18ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಶಾಶ್ವತ ಅನುದಾನರಹಿತ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಟ್ರಸ್ಟ್ / ಸಂಸ್ಥೆಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಇಲಾಖಾ ವೆಬ್‌ಸೈಟ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ (ವೆಬ್‌ಸೈಟ್ ವಿಳಾಸ: www.pue.Kar.nic.in).

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999. ದಿನಾಂಕ:09-10-2006ರನ್ವಯ ಜಾರಿಯಾಗಿರುವ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನ. ಇತ್ಯಾದಿ) ನಿಯಮಗಳು 2006. ಈ ನಿಯಮಗಳ ನಿಯಮ 4(2) ಮತ್ತು 4(3) ರಂತೆ, ಕೆಳಕಂಡ ಕ್ರಮಗಳನ್ನು ಅನುಸರಿಸುವುದು:

1. ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನರಹಿತ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ

ನಿಯಮ 4(2)(a) ರಂತೆ ಉದ್ದೇಶಿತ ಪದವಿ ಪೂರ್ವಕಾಲೇಜಿಗಾಗಿಯೇ (ಪ್ರತ್ಯೇಕವಾಗಿ) 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು ಹಾಗೂ ನಿಯಮ 4(2)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರಾಂಶುಪಾಲರ ಕೊಠಡಿ, ಕಚೇರಿಕೊಠಡಿ, ಸಿಬ್ಬಂದಿ ಕೊಠಡಿ, ಪಾಠ ಬೋಧನಾ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯಗಳು, ಶೌಚಾಲಯ, ಸೈಕಲ್ ಸ್ಟ್ಯಾಂಡ್, ಆಟದ ಮೈದಾನ ಹಾಗೂ ನೀರಿನ ಸೌಲಭ್ಯ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿರತಕ್ಕದ್ದು.

2. ಸದರಿ ನಿವೇಶನವು ಸಂಸ್ಥೆಯ/ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿದ್ದು, ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ ಪದನಾಮದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ನಿಯಮಗಳ ಅನ್ವಯ ನೋಂದಣಿಯಾಗಿರಬೇಕು.

3. ನಿವೇಶನ / ಕಟ್ಟಡವನ್ನು ಬಾಡಿಗೆಗೆ ಪಡೆದು ಪದವಿ ಪೂರ್ವಕಾಲೇಜನ್ನು ನಡೆಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

4. Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವLetter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು. Letter of intent ಮೂರು ವರ್ಷಗಳ ನಂತರ ತನ್ನ ಸಿಂಧುತ್ವವನ್ನು / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷಗಳೊಳಗೆ ಉದ್ದೇಶಿತ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ.

5. ಒಂದು ವೇಳೆ ಉದ್ದೇಶಿತ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಲ್ಲಿ, ನಿಯಮ 4(4) ರಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ ವೇಳಾಪಟ್ಟಿಗೆ ಅನುಗುಣವಾಗಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

**2. ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು:**

1. ಸಂಸ್ಥೆ / ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.

2. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ನೀಡಿರಬಾರದು. ಸಂಸ್ಥೆಯನ್ನು ಟ್ರಸ್ಟ್ ಆಗಿ ಅಥವಾ ಟ್ರಸ್ಟ್‌ನ್ನು ಸಂಸ್ಥೆಯಾಗಿ ನಿಯಮಬಾಹಿರವಾಗಿ ಪರಿವರ್ತಿಸಿರಬಾರದು. ಈ ಬಗ್ಗೆ ಸಂಸ್ಥೆ/ಟ್ರಸ್ಟ್‌ನ ಸಕ್ಷಮ

ಪ್ರಾಧಿಕಾರಿಯು ರೂ.200/-ರ ಇ-ಸ್ಟ್ಯಾಂಪ್ ಪೇಪರ್‌ನಲ್ಲಿ ನೋಟರಿ ದೃಢೀಕೃತ ಅಫಿಡವಿಟ್ (ಪ್ರಮಾಣ ಪತ್ರ) ಸಲ್ಲಿಸತಕ್ಕದ್ದು.

3. ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು ಹೊಂದಿರಬೇಕು.

4. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.

5. ಸಂಸ್ಥೆ / ಟ್ರಸ್ಟ್ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ **ರೂ.28.80 ಲಕ್ಷಗಳ** ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.

6. ಸಂಸ್ಥೆ / ಟ್ರಸ್ಟ್‌ನ ಆಡಿಟ್‌ನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.

7. ಉದ್ದೇಶಿತ ಪದವಿ ಪೂರ್ವಕಾಲೇಜಿಗಾಗಿ ಸಂಸ್ಥೆ / ಟ್ರಸ್ಟ್ ತನ್ನ ಸ್ವಾಧೀನಾನುಭವದಲ್ಲಿ ಕನಿಷ್ಠ **25000** (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು.

8. ಸದರಿ 25000 ಚದರ ಅಡಿಗಳ ನಿವೇಶನ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ **ಪದನಾಮದಲ್ಲಿ** ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ಹೆಸರಿನಲ್ಲಿಇರಬಾರದು.

9. ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ **ಭೋಗ್ಯಕ್ಕೆ** ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು ಕನಿಷ್ಠ **30 ವರ್ಷಗಳ ಅವಧಿಗೆ** ಮಾಡಿರಬೇಕು. ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುನ್ನ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. **ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್ ಪೇಪರ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು. ಹಾಗೂ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು. ಪ್ರಸ್ತುತ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿನಲ್ಲಿರಬೇಕು.**

10. ನೋಟರಿಯವರ ಸಮ್ಮುಖದಲ್ಲಿ ಸ್ಟೇರಿಂಗ್ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ / ಕಟ್ಟಡವನ್ನು ಸಂಸ್ಥೆ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುವ ನಿವೇಶನ / ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.

11. ಉದ್ದೇಶಿತ ಪದವಿ ಪೂರ್ವಕಾಲೇಜಿನ ನಿವೇಶನ / ಕಟ್ಟಡದಲ್ಲಿ ನಿಯಮ 4ರನ್ವಯ ಮೂಲಭೂತ ಸೌಲಭ್ಯಗಳಿರಬೇಕು.

3. ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆಅನುಗುಣವಾಗಿ ಇಲ್ಲದಿದ್ದಲ್ಲಿ ತಪಾಸಣಾ ಸಮಿತಿಗೆ ಸ್ಥಳ ಪರಿಶೀಲನೆ ನಡೆಸುವ ಕುರಿತು ಸೂಚನೆ ನೀಡದೆ, ಈ ಹಂತದಲ್ಲಿಯೇ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

**2017-18ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| ಕ್ರಸಂ | ಘಟನಾವಳಿಗಳ ವಿವರ | ದಿನಾಂಕ |
|---|---|---|
| 1 | ಅರ್ಜಿ ಟ್ರಸ್ಟ್ / ಸಂಸ್ಥೆಯ ಆಡಳಿತ ಮಂಡಳಿಗಳು ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಶುಲ್ಕ ರೂ.36,000/- ದೊಂದಿಗೆ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕಡೆಯ ದಿನಾಂಕ (Form – Iರಲ್ಲಿ) – (ನಿಯಮ- 4 ರಂತೆ). | 31-01-2017 |
| 2 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಹಾಗೂ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟ್ / ಸೊಸೈಟಿಗಳಿಗೆ ನಿರ್ದೇಶನಾಲಯದಿಂದ Letter of intent ನೀಡಲುಕೊನೆಯ ದಿನಾಂಕ | 06-02-2017 |
| 3 | ನಿರ್ದೇಶನಾಲಯವು ನೀಡಿರುವLetter of intentಗೆ ಆಡಳಿತ ಮಂಡಳಿಯವರು 2017-18ನೇ ಶೈಕ್ಷಣಿಕ ಸಾಲಿನಲ್ಲಿಯೇ ಖಾಸಗಿ ಪದವಿ ಪೂರ್ವಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ನಿಯಮ- 4ರಂತೆಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯೊಂದಿಗೆ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 20-02-2017 |
| 4 | ಜಿಲ್ಲಾತಪಾಸಣಾ ಸಮಿತಿಯು ಉದ್ದೇಶಿತ ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವ ಕೊನೆಯ ದಿನಾಂಕ<br>1. ನಿರ್ದೇಶನ ನೀಡಿದ 15 ದಿನಗಳ ಒಳಗಾಗಿ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ಸಮಿತಿಯು ವರದಿಯನ್ನು ದಾಖಲೆಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.<br>2. ತಪಾಸಣಾ ಸಮಿತಿಯು ನೀಡುವ ವರದಿಯನ್ನು ಜಿಲ್ಲಾ ಉಪ ನಿರ್ದೇಶಕರು ಮುಂದಿನ 05 ದಿನಗಳ ಒಳಗಾಗಿ ನಿರ್ದೇಶನಾಲಯಕ್ಕೆ ತಲುಪಿಸುವುದು. | 17-03-2017 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

[ ರೇವಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ [ಪ್ರಾಥಮಿಕ]

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯ, ವಿಕಾಸಸೌಧ , ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಪ್ರಕಟಿತ 500 ಪ್ರತಿಗಳನ್ನು ಒದಗಿಸಲು.

ಪ್ರತಿ :

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
4. ನಿರ್ದೇಶಕರು(ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು(ಪ್ರಾಥಮಿ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂಧಪಟ್ಟ ಆಯುಕ್ತರ/ಅಪರ ಆಯುಕ್ತರ ಮುಖಾಂತರ.
8. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳಿಗೆ, ನಿರ್ದೇಶಕರು (ಪದವಿ ಪೂರ್ವ ಶಿಕ್ಷಣ ಇಲಾಖೆ) ಮಲ್ಲೇಶ್ವರಂ, ಬೆಂಗಳೂರು ಇವರ ಮುಖಾಂತರ.
9. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.